# ಬಾದರಾಯಣ ಪ್ರತಿಷ್ಠಾನದ ಧ್ಯೇಯಗಳು

- ಬಾದರಾಯಣ ಪ್ರತಿಷ್ಠಾನವನ್ನು ಭಾರತದ ಋಷಿ ಪ್ರಣೀತ, ಸನಾತನ ಧರ್ಮದ ಮೂಲವಾದ ವೇದ, ವೇದಾಂತ, ಆಗಮ, ಜ್ಯೋತಿಷ್ಯ, ನಾಡೀ ಜ್ಯೋತಿಷ್ಯ, ಧರ್ಮಶಾಸ್ತ್ರ ತಂತ್ರಶಾಸ್ತ್ರ ಉಪನಿಷತ್ತು, ಮುಂತಾದವುಗಳ ಪ್ರಸಾರ, ಸಂಶೋಧನೆ, ಪ್ರಕಟಣೆಗೆ ಮಹತ್ವ ನೀಡುವುದು, ಅಂತಹ ಕಾರ್ಯಗಳನ್ನು ಕೈಗೊಳ್ಳುವುದು ನಮ್ಮ ಧ್ಯೇಯವಾಗಿದೆ.
- ಸನಾತನ ಧರ್ಮದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮತ್ತು ಜ್ಞಾನವನ್ನು ಮೂಡಿಸುವುದು ಮತ್ತು ಪ್ರಸಾರ ಮಾಡುವ ಉದ್ದೇಶವಿರುವುದರಿಂದ 'ಶುಕವಾಣಿ' ಎಂಬ ಮಾಸಪತ್ರಿಕೆಯ ಮೂಲಕ ಪ್ರಸಾರಕಾರ್ಯ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ನಂತರ ಗ್ರಂಥಗಳ ಪ್ರಕಟಣಾ ಕಾರ್ಯವನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು.
- ಬಹಳಷ್ಟು ಪುರಾತನ ಗ್ರಂಥಗಳು ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ಅಂತಹ ಅಲಭ್ಯ ಕೃತಿಗಳ ಮುದ್ರಣ ಕಾರ್ಯ ಕೈಗೊಳ್ಳಲಾಗುವುದು. ಲೇಖಕರು ಮುದ್ರಿಸಲು ಅಶಕ್ತರಾಗಿದ್ದರೆ, ಮುದ್ರಣ ಕಾರ್ಯ ಸ್ಥಗಿತಗೊಂಡಿದ್ದಲ್ಲಿ ಅಂತಹ ಕೃತಿಗಳನ್ನು ಪ್ರತಿಷ್ಠಾನದ ವತಿಯಿಂದ ಪ್ರಕಟಗೊಳಿಸುವ ಉದ್ದೇಶವಿದೆ. ಲೇಖಕರು ತಮ್ಮ ಬಳಿಯಿರುವ ಪುಸ್ತಕ / ಹಸ್ತಪ್ರತಿಯೊಡನೆ ಅಧ್ಯಕ್ಷರನ್ನು ಭೇಟಿಯಾಗಬಹುದು.
- ಧಾರ್ಮಿಕ ಕ್ಷೇತ್ರದಲ್ಲಿ ಹಲವಾರು ವಿದ್ವಾಂಸರು ಸೇವೆ ಸಲ್ಲಿಸುತ್ತಿದ್ದಾರೆ. ಅಂತಹ ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಸನ್ಮಾನ ಮಾಡುವುದು, ಅವರಿಂದ ಹೊಸ ಹೊಸ ಗ್ರಂಥಗಳನ್ನು ರಚಿಸಲು ಪ್ರೇರಣೆ ನೀಡುವುದು ಈ ಪ್ರತಿಷ್ಠಾನದ ಮುಖ್ಯ ಉದ್ದೇಶ.
- ಶೈಕ್ಷಣಿಕ ಕ್ಷೇತ್ರದಲ್ಲೂ ನಮ್ಮ ಸೇವೆಯನ್ನು ವಿಸ್ತರಿಸುವ ಹಂಬಲವಿದೆ. ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ 'ಪ್ರತಿಭಾ ಪುರಸ್ಕಾರ'ದ ಮೂಲಕ ಸಹಾಯ ಮಾಡುವ ಹಂಬಲವಿದೆ.
- ಸಮಯೋಚಿತ ಲೇಖನಗಳ ಸಂಗ್ರಹ, ವಿಚಾರ ಸಂಕಿರಣ, ಸೋದಾಹರಣ ಉಪನ್ಯಾಸಗಳು, ಧ್ಯಾನ ಶಿಬಿರಗಳು, ತೀರ್ಥಕ್ಷೇತ್ರ ಸಂದರ್ಶನ ಮುಂತಾದವುಗಳನ್ನು ಯೋಜಿಸುವುದು.
- ಭಾರತದ ಆರ್ಷ, ಸನಾತನ ಸಂಸ್ಕೃತಿಯ ಬಗ್ಗೆ ಶ್ರದ್ಧಾಭಿಮಾನಿಗಳುಳ್ಳ ಭಕ್ತರನ್ನು, ವ್ಯಕ್ತಿಗಳನ್ನು, ಸಂಸ್ಥೆಗಳನ್ನು, ಉದ್ಯಮಗಳನ್ನು ಈ ಯೋಜನೆಯಲ್ಲಿ ಪಾಲ್ಗೊಳ್ಳಲು/ಕೈ ಜೋಡಿಸುವಂತೆ ಆಹ್ವಾನಿಸುತ್ತ ಸಮಾಜದಲ್ಲಿ ಸಂಸ್ಕೃತಿ, ಆಧ್ಯಾತ್ಮಿಕ ಸಂಪನ್ನತೆ, ನೈಮಿಕಾದರ್ಶ, ಮೇಧಾಶಕ್ತಿ, ಹಾಗೂ ವೃತ್ತಿ ತಜ್ಞತೆಗಳುಳ್ಳ ನಾಯಕರನ್ನು ರೂಪಿಸುವತ್ತ ಪ್ರಯತ್ನಿಸುವುದು.

**ಶುಕವಾಣಿ ಮಾಸಪತ್ರಿಕೆಗೆ ಲೇಖಕರಿಂದ ಧಾರ್ಮಿಕ, ಆಧ್ಯಾತ್ಮಿಕ ಲೇಖನಗಳನ್ನು ಆಹ್ವಾನಿಸುತ್ತೇವೆ. ಡಿ.ಟಿ.ಪಿ. ಅಥವಾ ಸ್ಪಷ್ಟ ಬರಹದ ಪ್ರತಿಯನ್ನು ಕಳುಹಿಸಿ. ಸಮಯೋಚಿತ ಬರಹಗಳಿಗೆ, ವಿಶೇಷ ಲೇಖನಗಳಿಗೆ ಆದ್ಯತೆ. – ವ್ಯವಸ್ಥಾಪಕ ಸಂಪಾದಕರು**